



# ಇಮೋಜಿಗಳು ಸಾರ್ ಇಮೋಜಿಗಳು!

**ಎದುರು ಬದರು ಕುಳಿತು ಹರಟುವುದು ಹೋಗಿ ಮೊಬೈಲ್ ಮಾತುಕತೆ ಬಂತು. ಮೊಬೈಲ್ ಮಾತೂ ಕಮ್ಮಿಯಾಗಿ ಆ ಜಾಗವನ್ನು ಸಂದೇಶ ಆಕ್ರಮಿಸಿಕೊಂಡಿತು. ಈಗ ಸಂದೇಶದ ಗತ್ತನ್ನು ಇಮೋಜಿಗಳು ವರ್ಗಾಯಿಸಿಕೊಂಡಿವೆ. ಈ ಇಮೋಜಿಗಳ ಹಿಂದೆ ಏನೆಲ್ಲಾ ಇದೆ ಗೊತ್ತೇ?**

**■ ಪ್ರೀತಿ ಎಮ್. ಸಂಗಮ್**

ಶಿಗೆಟಾಕಾ ಕುರಿಟಾ ಎಂಬ ಜಪಾನಿ ವಿನ್ಯಾಸಕ ಇಮೋಜಿಗಳನ್ನು ಕಂಡುಹಿಡಿದು ಅಂದಾಜು ಮೂರು ದಶಕಗಳೇ ಕಳೆದಿದ್ದರೂ ನಮ್ಮ ಮೊಬೈಲ್‌ಗಳ ಕೀಬೋರ್ಡ್‌ನಲ್ಲಿ ಇಮೋಜಿಗಳು ಬೋರ್ಡಿಂಗ್ ಪಾಸ್ ಪಡೆದದ್ದು ಕಳೆದ ಒಂದು ದಶಕದಿಂದೀಚೆ. ಅದಕ್ಕೆ ಮೊದಲು, ಮುಖದ ಅಭಿವ್ಯಕ್ತಿಯ ಪ್ರಾತಿನಿಧ್ಯವಾಗಿ ಒಂದು ನಗುವನ್ನು, ಬೇಸರವನ್ನು ಅಥವಾ ಫ್ಲರ್ಟಿಂಗ್ ಭಾವನೆಯನ್ನು ವ್ಯಕ್ತಪಡಿಸಲು ಕೀಬೋರ್ಡ್‌ನಲ್ಲಿರುವ ವಿವಿಧ ಚಿಹ್ನೆಗಳನ್ನು ಕುಟ್ಟಿ ಕುಟ್ಟಿ ಹರಸಾಹಸ ಪಡಬೇಕಿತ್ತು.

ಇಮೋಜಿ ಕೀಬೋರ್ಡ್ ಬಂದ ಮೇಲೆ ಆ ತಾಪತ್ರಯ ತಪ್ಪಿ ಭಾವನೆಗಳ, ವಸ್ತುಗಳ ಹಾಗೂ ಇನ್ನೂ ಹತ್ತು ಹಲವಾರು ಇಮೋಜಿಗಳ ಮಹಾಪೂರವೇ ಹರಿದು ಬಂತು. ನೋಡುನೋಡುತ್ತಲೇ ಈ ಇಮೋಜಿಗಳ ಮಹಾಪೂರದಲ್ಲಿ ಮಿಂದವರು ಯುವಕ ಯುವತಿಯರು.

ಶಾರ್ಟ್ ಫಾರ್ಮ್‌ಗಳ ಪ್ರಭಾವದಿಂದ ಉದ್ದುದ್ದ ವಾಕ್ಯಗಳನ್ನು ಟೈಪಿಸಲು ಮೊದಲೇ ಮುಷ್ಕರ ಹೂಡುತ್ತಿದ್ದ ಯುವಕ ಯುವತಿಯರ ಕೈಬೆರಳುಗಳು ಇಮೋಜಿಗಳ ಹಾವಳಿಯಿಂದಂತೂ ಚಾದರ ಹೊದ್ದುಕೊಂಡು ಮಲಗಿಬಿಟ್ಟಿವೆಯೆಂದರೆ ತಪ್ಪಾಗದು. ಟೈಪಿಸಲು ಅವರಿಗೆ ಸೋಮಾರಿತನ ಎನ್ನುವುದು ವಯಸ್ಸಾದವರ ಅಭಿಮತವಾದರೆ, ಸಂದರ್ಭಕ್ಕೆ ಸರಿಯಾದ ಇಮೋಜಿ ಬಳಸುವುದಕ್ಕೆ ಕೂಡ ಬುದ್ಧಿವಂತಿಕೆ ಬೇಕು ಎನ್ನುವುದು ನವಪೀಳಿಗೆ ವಾದ. ಅದೂ ಸರಿಯೇ ಬಿಡಿ. ಇಂತಹ ಬುದ್ಧಿವಂತಿಕೆ ಎಲ್ಲರಿಗೂ ಬಾರದು. ಹಳೆ ಬೇರು ಹೊಸ ಚಿಗುರು... ಇಬ್ಬರ ವಾದವೂ ಸರಿಯೇ.

ಇಂದಿನ ಇಮೋಜಿ ಗಿರಾಕಿಗಳು ಮೊದಲೆಲ್ಲಾ ಶಾರ್ಟ್ ಫಾರ್ಮ್ ಬಳಸಿ LOL, 2Moro, ROFL, ASAP, BTW ಅಂತೆಲ್ಲಾ ಬರೆದ್ರೆನೇ ಅದನ್ನು ಅರ್ಥ ಮಾಡಿಕೊಂಡು ಉತ್ತರ ಕೊಡುವ ಹೊತ್ತಿಗೆ ಸೋತು ಸುಣ್ಣವಾಗುವ ಕೆಲವರಿಗೆ, ಈಗ ಈ ಡಿಜಿಟಲ್ ಚಿತ್ರಗಳ ಮುಖಾಂತರ ಕಳಿಸುವ ಸಂದೇಶದ ಅರ್ಥ ತಿಳಿದುಕೊಂಡು ಪ್ರತಿಕ್ರಿಯಿಸುವ ಹೊತ್ತಿಗೆ ಎಲ್ಲ ಗ್ರಹಗಳು ಸೂರ್ಯಪ್ಪನ ಸುತ್ತ ಒಂದು ಸುತ್ತು ಗಿರಕಿ ಹೊಡೆದು ಮುಗಿಸಿರುತ್ತವೆ.

ಭಾವನೆಗಳಿಗೆ ಮೀಸಲಾದ ಫೇಸ್ ಇಮೋಜಿಯ ಮುಖ ಇರುವುದೇ ಬಟಾಣಿ ಕಾಳಿನಷ್ಟು. ಅಷ್ಟು ಚಿಕ್ಕ ಮುಖದಲ್ಲಿ ಸಾಸಿವೆ ಕಾಳಿನಷ್ಟು ಕಣ್ಣುಗಳು, ಕಮಾನಿನಷ್ಟು ಅಥವಾ ಪುಟ್ಟ ಅರ್ಧ ಚಂದ್ರಮನಷ್ಟು ಬಾಯಿ ಮತ್ತು ವಿವಿಧ ಆಕಾರದ ಹುಬ್ಬುಗಳು. ಒಂದೊಂದು ಇಮೋಜಿ ಒಂದೊಂದು ತರಹ. ಮುಂಡವಿಲ್ಲದ ಈ ರುಂಡಗಳನ್ನು ನೋಡಲು ಎರಡು ಕಣ್ಣುಗಳು ಸಾಲದು, ಅವುಗಳನ್ನು ಬಣ್ಣಿಸಲು ಒಂದು ಬಾಯಿ ಸಾಲದು.

ಪಾರ್ಲರ್‌ನಲ್ಲಿ ಅನನುಭವಿ ವ್ಯಕ್ತಿಯ ಕಡೆಗೆ ಐಬ್ರೋ ಶೇಪ್ ಮಾಡಿಸಲು ಹೋಗಿ ಕೆಲವು ಇಮೋಜಿಗಳದ್ದು ಒಂದು ಹುಬ್ಬು ಮೇಲೆ ಮತ್ತೊಂದು ಕೆಳಗೆ ಆಗಿದ್ದರೆ, ಇನ್ನು ಕೆಲವದ್ದು ಒಂದು ಹುಬ್ಬು ಪೂರ್ವಕ್ಕೆ ಮತ್ತೊಂದು ಪಶ್ಚಿಮಕ್ಕೆ ವಾಲಿರುತ್ತದೆ. ಕೆಲವು ಸೆಕೆಯ ಕಾರಣ ಒಂದು ಹುಬ್ಬನ್ನು ಮಾತ್ರ ಬೋಳಿಸಿಕೊಂಡಿದ್ದರೆ, ನಾವೇನು ಕಮ್ಮಿ ಎನ್ನುವ ಹಾಗೆ ಇನ್ನು ಕೆಲವು ಇಮೋಜಿಗಳು ಎರಡೂ ಹುಬ್ಬುಗಳನ್ನು ಬೋಳಿಸಿಕೊಂಡಿರುತ್ತವೆ.

ಇದಿಷ್ಟು ಹುಬ್ಬಿನ ಪಾರ್ಲರ್ ಪುರಾಣವಾದರೆ, ಕಣ್ಣಿನದ್ದೇನೂ ಕಡಿಮೆಯಿಲ್ಲ. ಇವುಗಳ ಕಣ್ಣುಗಳನ್ನು ನೋಡುವುದೇ ಕಣ್ಣಿಗೆ ಹಬ್ಬ. ಒಂದು ಇಮೋಜಿಗೆ ನಕ್ಷತ್ರದಂತಹ ಕಣ್ಣುಗಳಿದ್ದರೆ, ಇನ್ನೊಂದಕ್ಕೆ ಹಾರ್ಟ್ ಆಕಾರದ ಕಣ್ಣುಗಳು, ಕೆಲವೊಂದಕ್ಕೆ ಗಣಿತದ ಚಿಹ್ನೆಗಳಾದ ಹೆಚ್ಚು (>) ಮತ್ತು ಕಡಿಮೆ (<), ಗುಣಾಕಾರದ (X) ಕಣ್ಣುಗಳು. ಒಂದು ಇಮೋಜಿ ಕಣ್ಣಿಗೆ ಕ್ಯಾಟರಾಕ್ಟ್ ಆಪರೇಷನ್ ಮಾಡಿಸಿಕೊಂಡು ಕಪ್ಪು ಕನ್ನಡಕ

